# ಮೈಸೂರು ವಿಶ್ವವಿದ್ಯಾನಿಲಯ

Estd-1916

(Re-accredited by NAAC with CGPA 3.47 on four point scale with A grade)

ಸಂಖ್ಯೆ: ಪ.ವಿ.8.1/ಪಿ.ಜಿ.ಬಿ/75/2009-10

ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005
ದಿನಾಂಕ: 18-08-2018

## ಅಧಿಸೂಚನೆ

ವಿಷಯ: 2018ರ ಆಗಸ್ಟ್‌ನಲ್ಲಿ ನಡೆಯಲಿರುವ ಸ್ನಾತಕೋತ್ತರ ಪದವಿಯ III & IVನೇ ಸೆಮಿಸ್ಟರ್ ಹಾಗೂ ಎಂ.ಸಿ.ಎ V & VIನೇ ಸೆಮಿಸ್ಟರ್‌ನ ಮೇಕಪ್ (ಸಿಬಿಸಿಎಸ್ ಪದ್ಧತಿ) ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕ ಪಾವತಿ ಮಾಡಲು ಮತ್ತು ಅಭ್ಯರ್ಥನ ಪತ್ರ ಸಲ್ಲಿಸುವ ಬಗೆಗೆ.

ಉಲ್ಲೇಖ:
1. ವಿಶ್ವವಿದ್ಯಾನಿಲಯ ಅಧಿಸೂಚನೆ ಸಂಖ್ಯೆ: ಎ.ಸಿ.ಎಸ್(2)34/1990-91, ದಿನಾಂಕ: 23-06-2016.
2. ಕುಲಸಚಿವರ ಸುತ್ತೋಲೆ ಸಂಖ್ಯೆ:ಎ.ಸಿ.ಎಸ್(2)34/1990-91, ದಿನಾಂಕ: 04-08-2017.

*****

ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ, 2018ರ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ CBCS ಪದ್ಧತಿಯ ಎಲ್ಲಾ ಕೋರ್ಸ್‌ಗಳ III & IVನೇ ಸೆಮಿಸ್ಟರ್ ಹಾಗೂ ಎಂ.ಸಿ.ಎ. ಕೋರ್ಸಿನ V & VIನೇ ಸೆಮಿಸ್ಟರ್‌ನ ಸ್ನಾತಕೋತ್ತರ ಪದವಿಯ ಮೇಕಪ್ ಪರೀಕ್ಷೆಗಳನ್ನು (Makeup Examination), ಸೆಪ್ಟೆಂಬರ್ 2018ರ 10, 11, 14 ಮತ್ತು 15 ರಂದು **ವಿಶ್ವವಿದ್ಯಾನಿಲಯದ ಪರೀಕ್ಷಾ ಭವನದಲ್ಲಿ (ಕ್ರಾಫರ್ಡ್ ಭವನ ಹಿಂಭಾಗ) ಏರ್ಪಡಿಸಲಾಗಿದೆ.** ಪರೀಕ್ಷಾ ವೇಳಾ ಪಟ್ಟಿಯನ್ನು ಸಂಬಂಧಪಟ್ಟ ಅಧ್ಯಯನ ವಿಭಾಗಗಳು ಸಿದ್ದಪಡಿಸಿ ಸಂಬಂಧಿಸಿದ ವಿಷಯಗಳನ್ನು (concerned subject) ಬೋಧನೆ ಮಾಡುತ್ತಿರುವ ಇತರ ಕೇಂದ್ರ/ವಿಭಾಗ/ಕಾಲೇಜುಗಳಿಗೆ ಕಳುಹಿಸಿ ಕೊಡುವುದು ಹಾಗೂ ಅದರ ಒಂದು ಪ್ರತಿಯನ್ನು ಈ ಕಛೇರಿಗೂ ಸಹ ಕಳುಹಿಸುವುದು.

| | | |
|---|---|---|
| 1 | **Open Elective** ಪರೀಕ್ಷೆಗಳನ್ನು ದಿನಾಂಕ: 10-09-2018 ರಂದು ಮಾತ್ರ ಎರಡು ಸೆಷನ್‌ನಲ್ಲಿ ನಡೆಯುವಂತೆ ಮತ್ತು ಇತರ ವಿಷಯಗಳನ್ನು ಸೆಪ್ಟೆಂಬರ್ 2018ರ 11, 14 ಮತ್ತು 15 ರಂದು ಎರಡು ಸೆಷನ್‌ಗಳಲ್ಲಿ ನಡೆಯುವಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸುವುದು (ಸಮಯ 10.00 AM – 1.00 PM ಮತ್ತು 2.00 PM – 5.00 PM). | |
| 2 | ಪರೀಕ್ಷಾ ಶುಲ್ಕ ಪಾವತಿಸಲು ಹಾಗೂ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 30-08-2018 |
| 3 | ವೇಳಾಪಟ್ಟಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 31-08-2018 |
| 4 | ಪ್ರಶ್ನೆ ಪತ್ರಿಕೆ ಬೇಡಿಕೆ ಪಟ್ಟಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 31-08-2018 |
| 5 | ಪರೀಕ್ಷಾ ಅರ್ಜಿಗಳು, ಪ್ರವೇಶ ಪತ್ರಗಳು, ಅಭ್ಯರ್ಥನ ಪಟ್ಟಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 31-08-2018 |

| ಪರೀಕ್ಷಾ ಶುಲ್ಕಗಳ ವಿವರಗಳು | |
|---|---|
| **1. M.Sc. Food Science/ Speech & Hearing/ MTA/MTTM/ LLM/ M.Sc. Computer Science/M.Tech in Material Science/MS(IT)/M.Tech in URP/M.Sc. Bioscience/Polymer Science/ Biotechnology/ Biochemistry/ Environment Science/ MCA/ Sugar Technology/ Electronics/M.Lib.Sci./ M.Com(FS)/MFAM/MBA(Agri-Business)/MSW/ M.Sc (Criminology & Forensic Science).** | |
| i. Whole Exam (Per Sem./Exam) | ₹ 2000/- |
| ii. Per Paper with Practical | ₹ 800/- |
| iii. Per paper without Practical | ₹ 520/- |
| **2. M.Com/M.Ed/M.P.Ed./M.Sc/M.Music/M.Dance/M.A and all other Master Degree Courses:** | |
| i. Whole Exam (Per exam) | ₹ 1300/- |
| ii. Per Paper with Practical | ₹ 800/- |
| iii. Per Paper without Practical | ₹ 520/- |
| **3. Marks Card Fee (Per Year/Semester)** | ₹ 290/- |

ವಿ.ವಿ.ಆದೇಶ ಸಂಖ್ಯೆ:ಎಸಿ.2(ಎಸ್)/122/04-05, ದಿನಾಂಕ: 04-02-2005ರ ಪ್ರಕಾರ ಎಲ್ಲಾ ಪದವಿ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಪತ್ರಿಕೆಗಳ ಪರೀಕ್ಷೆ ತೆಗೆದುಕೊಂಡಲ್ಲಿ ಪಾವತಿಸಬೇಕಾದ ಗರಿಷ್ಠ ಪರೀಕ್ಷಾ ಶುಲ್ಕವು ಆಯಾಯ ವರ್ಷಕ್ಕೆ ವಿಷಯವಾರು ನಿಗದಿಗೊಳಿಸಲಾಗಿರುವ ಪೂರ್ಣ ಪರೀಕ್ಷಾ ಶುಲ್ಕಕ್ಕೆ (Whole examination fee) ಸಮಾನವಾಗಿರುತ್ತದೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

**ಸೂಚನೆಗಳು:**

1. **Special Makeup** ಪರೀಕ್ಷೆ ತೆಗೆದುಕೊಂಡಿರುವ ಎಲ್ಲಾ ಕೋರ್ಸ್‌ಗಳ III & IV ಮತ್ತು ಎಂ.ಸಿ.ಎ ಕೋರ್ಸಿನ V & VIನೇ ಸೆಮಿಸ್ಟರ್ ವಿದ್ಯಾರ್ಥಿಗಳ ಅಭ್ಯರ್ಥನ ಪಟ್ಟಿಯನ್ನು **(Candidate List)** ಪ್ರತ್ಯೇಕವಾಗಿ ಈ ಕಛೇರಿಗೆ ಕಳುಹಿಸುವುದು.
2. **Special Makeup** ಪರೀಕ್ಷೆ ಲಿಖಿತ, ಪ್ರಾಯೋಗಿಕ, ಮೌಖಿಕ, ಮಹಾ/ಲಘು ಪ್ರಬಂಧ/ಪ್ರಾಜೆಕ್ಟ್‌ಗಳಿಗೂ ಅನ್ವಯಿಸುತ್ತದೆ.
3. ಪ್ರಾಯೋಗಿಕ, ಮೌಖಿಕ ಪರೀಕ್ಷೆಗಳ ವೇಳಾಪಟ್ಟಿಗಳನ್ನು (ಲಿಖಿತ ಪರೀಕ್ಷೆಗಳ ನಂತರ) ಪರೀಕ್ಷಾ ಮಂಡಳಿ ಅಧ್ಯಕ್ಷರೊಡನೆ ಸಮಾಲೋಚಿಸಿ ನಿಗದಿಪಡಿಸಿ ನಂತರ ಪರೀಕ್ಷೆ ನಡೆಸಿ ಅಂಕಗಳನ್ನು ವಿಶ್ವವಿದ್ಯಾನಿಲಯಕ್ಕೆ ಕಳುಹಿಸುವುದು.
4. ಅನುತ್ತೀರ್ಣ ವಿದ್ಯಾರ್ಥಿಗಳು ಮತ್ತು ಅಂಕಗಳ ಮರುಸಂಕಲನ/ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳೂ ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳು ಮೇಲೆ ಸೂಚಿಸಿದ ದಿನಾಂಕಗಳಂದು ಅಥವಾ ಅದಕ್ಕಿಂತ ಮುಂಚಿತವಾಗಿ ಪರೀಕ್ಷಾ ಶುಲ್ಕವನ್ನು ಪಾವತಿಸಿದ ಬ್ಯಾಂಕ್ ಚಲನ್ ಮತ್ತು ಇತ್ತೀಚಿನ ಭಾವಚಿತ್ರದೊಂದಿಗೆ ಪರೀಕ್ಷಾ ಅರ್ಜಿಗಳನ್ನು ತಾವು ಅಧ್ಯಯನ ಮಾಡಿದ ವಿಭಾಗ/ಸಂಸ್ಥೆಗಳ ಮುಖಾಂತರ ಕಳುಹಿಸಬೇಕು.

5. ಕ್ರ.ಸಂ.ಎ.ಸಿ.2/182/92-93, ದಿನಾಂಕ: 02-03-2000ರ ಕುಲಸಚಿವರ ಪತ್ರದಲ್ಲಿ ತಿಳಿಸಿರುವ ರೀತ್ಯಾ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಾಗೂ ಕ್ಯಾಟಗರಿ-1ರ ವರ್ಗದ ವಿದ್ಯಾರ್ಥಿಗಳು ಸದರಿ ಕೋರ್ಸನ್ನು ಮುಗಿಸಿದ ನಂತರ ರಿಪೀಟರ್ಸ್ ಆಗಿ ಪರೀಕ್ಷೆಗಳನ್ನು ತೆಗೆದುಕೊಂಡಲ್ಲಿ ಅಂತಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕಗಳನ್ನು ತಪ್ಪದೆ ವಸೂಲು ಮಾಡಬೇಕೆಂದು ತಿಳಿಸಲಾಗಿದೆ.
6. ಒಮ್ಮೆ ಪಾವತಿ ಮಾಡಿದ ಪರೀಕ್ಷಾ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿಯೇ ಆಗಲಿ ಮರುಪಾವತಿ ಮಾಡಲಾಗುವುದಿಲ್ಲ ಅಥವಾ ಮುಂದಿನ ಪರೀಕ್ಷೆಗೆ ಹೊಂದಾಣಿಕೆ ಮಾಡಲಾಗುವುದಿಲ್ಲ.
7. ಪರೀಕ್ಷೆಯ ಒಂದು ಭಾಗವಾಗಿರುವ ಮಹಾನಿಬಂಧ/ಪ್ರೌಢ ಪ್ರಬಂಧ/ಪ್ರಾಜೆಕ್ಟ್ ಕಾರ್ಯ/ಕ್ಷೇತ್ರಕಾರ್ಯ ವರದಿ ಇತ್ಯಾದಿಗಳನ್ನು ನಿರ್ದಿಷ್ಟ ವಿಷಯದಲ್ಲಿನ ಲಿಖಿತ/ಪ್ರಾಯೋಗಿಕ ಪರೀಕ್ಷೆಯ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಅಧ್ಯಯನ ವಿಭಾಗಗಳ ಸಂಬಂಧಪಟ್ಟ ಅಧ್ಯಕ್ಷರು/ಮುಖ್ಯಸ್ಥರಿಗೆ ದ್ವಿಪ್ರತಿಗಳಲ್ಲಿ ಸಲ್ಲಿಸಬೇಕು. ಪ್ರೌಢಪ್ರಬಂಧದಲ್ಲಿ ವಿದ್ಯಾರ್ಥಿಯ ಹೆಸರು ಮತ್ತು ನೋಂದಣಿ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.

**ವಿಶೇಷ ಸೂಚನೆ:**

1) ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು/ನಿರ್ದೇಶಕರು/ಕಾಲೇಜುಗಳ ಮುಖ್ಯಸ್ಥರುಗಳು ಪರೀಕ್ಷಾ ಸಂಬಂಧ ಎಲ್ಲಾ ದಾಖಲೆಗಳನ್ನು ನಿಗದಿತ ದಿನಾಂಕದೊಳಗೆ ಕಳುಹಿಸಿಕೊಡುವುದು.
2) ಎಲ್ಲಾ ಕೋರ್ಸ್‌ಗಳ **III & IV ಮತ್ತು ಎಂ.ಸಿ.ಎ. ಕೋರ್ಸಿನ V & VIನೇ ಸೆಮಿಸ್ಟರ್‌ನ ಮೇಕಪ್ ಪರೀಕ್ಷೆಗಳನ್ನು ವಿಶ್ವವಿದ್ಯಾನಿಲಯದ ಪರೀಕ್ಷಾ ಭವನದಲ್ಲಿ ಏರ್ಪಡಿಸಿರುವುದನ್ನು ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತಪ್ಪದೇ ತರಬೇಕಾಗಿ ತಿಳಿಸಲಾಗಿದೆ.**

**ಕುಲಸಚಿವ (ಪರೀಕ್ಷಾಂಗ) ಅವರಿಂದ ಅನುಮೋದಿಸಲ್ಪಟ್ಟಿದೆ.**

K.N. [signature] 18/8/18
ಸಹಾಯಕ ಕುಲಸಚಿವ (ಪರೀಕ್ಷಾಂಗ)

ಇವರಿಗೆ:

1. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಮಾಗಂ, ಮೈಸೂರು.
2. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಮಂಡ್ಯ ಮತ್ತು ಹಾಸನ.
3. ನಿರ್ದೇಶಕರು, ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ.
4. ವಿಶ್ವವಿದ್ಯಾನಿಲಯದಿಂದ ಸಂಯೋಜಿತಗೊಂಡ ಎಲ್ಲಾ ಸ್ನಾತಕೋತ್ತರ ಕಾಲೇಜುಗಳು/ಕೇಂದ್ರಗಳು.
5. ಪ್ರೊ.ಎಂ.ಎ.ಶ್ರೀಧರ್, ಚೀಫ್ ನೋಡಲ್ ಆಫೀಸರ್ (ಸಿ.ಬಿ.ಸಿ.ಎಸ್. ಸ್ಕೀಂ ಮತ್ತು ಸಿ.ಎ.ಜಿ.ಪಿ ರೆಗ್ಯೂಲೇಷನ್), ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
6. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು.
7. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಶ್ರೀ. ರಾಜು ಪಟೇಲ್, ಪ್ರ.ದ.ಗು, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಮುಖ್ಯಸ್ಥರು, ಮೆ:ಲರ್ನಿಂಗ್ ಸ್ಪೈರಲ್ ಪ್ರೈವೇಟ್ ಲಿಮಿಟೆಡ್, ಪರೀಕ್ಷಾ ಭವನ, ಮೈವಿವಿ, ಮೈಸೂರು.
10. ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಶ್ವವಿದ್ಯಾನಿಲಯ ಆವರಣ ಶಾಖೆ, ಮೈಸೂರು- ಪರೀಕ್ಷಾ ಶುಲ್ಕ ಪಾವತಿಸಲು Payment gateway ಅನ್ನು ದಿನಾಂಕ:18-08-2018 ರಿಂದ 30-08-2018ರವರೆಗೆ ತೆರೆಯಲು ಕೋರಿದೆ.
11. ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮಾನಸಗಂಗೋತ್ರಿ, ಮೈಸೂರು.
13. ಎಲ್ಲಾ ಉಪ/ಸಹಾಯಕ ಕುಲಸಚಿವರು (ಪರೀಕ್ಷಾಂಗ)/ಅಧೀಕ್ಷಕರು, ಪರೀಕ್ಷಾ ವಿಭಾಗ, ಮೈವಿವಿ, ಮೈಸೂರು.
14. ಮಾನ್ಯ ಕುಲಪತಿ/ಕುಲಸಚಿವ/ ಕುಲಸಚಿವ (ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
15. ಕಾರ್ಯನಿರ್ವಾಹಕರು, ಪ.ವಿ.8.2/8.3/8.5/8.7/8.9/1.7/, ಓ.ಆರ್.ಪಿ ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು- ಸೂಕ್ತ ಕ್ರಮಕ್ಕಾಗಿ.
16. ಕಛೇರಿ ಪ್ರತಿ.

E: PG Notification-Ja